Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in principal@klsvdit.edu.in**

Date: 23-05-2022

**ಪತ್ರಿಕಾ ಪ್ರಕಟಣೆ**

## ಔಷಧೀಯ ಸಸ್ಯೋದ್ಯಾನ "ಸಂಜೀವಿನಿ ಸಸ್ಯಕಾಶಿ" ಉದ್ಘಾಟನೆ

ಕೆ.ಎಲ್.ಎಸ್ ವಿ.ಡಿ.ಐ.ಟಿ ಹಳಿಯಾಳದಲ್ಲಿ ನೂತನವಾಗಿ ಬೆಳೆಸಿರುವ ಔಷಧೀಯ ಸಸ್ಯೋದ್ಯಾನ "ಸಂಜೀವಿನಿ ಸಸ್ಯಕಾಶಿ" ಮೇ 11 ರಂದು ಉದ್ಘಾಟನೆಗೊಂಡಿತು. ಮಹಾವಿದ್ಯಾಲಯದ ಸಂಸ್ಥಾಪನಾ ಸಮಾರಂಭಕ್ಕೆ ಆಗಮಿಸಿದ್ದ ಗಣ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಕರ್ನಾಟಕ ಲಾ ಸೊಸೈಟಿಯ ಕಾರ್ಯದರ್ಶಿಗಳಾದ ಶ್ರೀ. ಎಸ್. ವಿ ಗಣಾಚಾರಿ ಔಷಧೀಯ ಸಸ್ಯೋದ್ಯಾನ ಉದ್ಘಾಟಿಸಿ ಮಾತನಾಡುತ್ತ ಭಾರತೀಯ ಪಾರಂಪರಿಕ ಔಷಧಿ ಸಸ್ಯಗಳ ಕುರಿತು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಈ ಸಸ್ಯೋದ್ಯಾನ ನಿರ್ಮಿಸಲಾಗಿದೆ ಎಂದು ನುಡಿದರು. ವಿ.ತಾ.ವಿ ಉಪಕುಲಪತಿಗಳಾದ ಡಾ. ಕರಿಸಿದ್ದಪ್ಪ, ಕುಲಸಚಿವರಾದ ಡಾ. ಎ. ಎಸ್. ದೇಶಪಾಂಡೆ ಮತ್ತು ಕೆ.ಎಲ್.ಎಸ್ ಸಂಸ್ಥೆಯ ಚೇರಮನ್ನರಾದ ಶ್ರೀ. ಪ್ರದೀಪ ಸಾವಕಾರ್, ಸಂಸ್ಥೆಯ ಪದಾಧಿಕಾರಿಗಳು ಮತ್ತು ಆಡಳಿತ ಮಂಡಳಿ ಸದಸ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ತುಳಸಿ, ಕರಿಮೆಣಸು, ಅಮೃತ ಬಳ್ಳಿ, ಅಶ್ವಗಂಧ, ದಾಲ್ಚಿನಿ, ಪಪ್ಪಾಯಿ, ವೀಳ್ಯದೆಲೆ, ಅತ್ತಿ, ಬೇವು ಮುತ್ತುಗ ಮುಂತಾದ 50 ಕ್ಕೂ ಹೆಚ್ಚು ಜಾತಿಯ ಗಿಡಗಳು ಈ ಸಸ್ಯೋದ್ಯಾನದಲ್ಲಿ ಪೋಷಿಸಲಾಗಿದ್ದು ಪ್ರತಿ ಗಿಡಕ್ಕೂ ಕ್ಯೂ.ಆರ್ ಕೋಡ್ ಹೊಂದಿದ ನಾಮಫಲಕ ಅಳವಡಿಸಿರುವುದು ವಿಶೇಶವಾಗಿದೆ. ಕ್ಯೂ.ಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಗಿಡದ ಔಷಧೀಯ ಗುಣಗಳನ್ನು ತಿಳಿದುಕೊಳ್ಳಬಹುದಾಗಿದೆ.

ಸಸ್ಯೋದ್ಯಾನ ಯೋಜನೆಯ ಸಂಯೋಜಕರು ಹಾಗೂ ಮಹಾವಿದ್ಯಾಲಯದ ಸಂಶೋಧನೆ ಮತ್ತು ಅಭಿವೃದ್ಧಿ ಡೀನ್ ಡಾ. ಮಹೇಂದ್ರ ಎಮ್ ದೀಕ್ಷಿತ್, ಪ್ರೊ. ದೀಪಕ್ ಶರ್ಮಾ, ಪ್ರೊ. ಶಿವಚಲೇಶ ಜಿ, ಪ್ರೊ. ರಾಹುಲ್ ಸಿ. ಎಮ್, ಪ್ರೊ. ಸೂರಜ್ ಕಡ್ಲಿ ಮತ್ತು ಸಿಬ್ಬಂದಿ ವರ್ಗದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು ಎಂದು ಪ್ರಾಂಶುಪಾಲರಾದ ಡಾ. ವಿ. ಎ. ಕುಲಕರ್ಣಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಾಂಶುಪಾಲರು

Principal
KLS Vishwanathrao Deshpande
Institute of Technology, Haliyal





